Vacant Post of Primary and High School Teachers in the State.

411 - Sri K.K. Eshwarappa (Shivamoga) : Will the Hon'ble Minister for Primary and Secondary Education be pleased to state?

a) *How many post of Primary and High School Teachers posts are vacant in the State?*

b) *When these vacant posts will be filled up?*

Sri H.G. Govindhe Gowda (Minister for Primary and Secondary Education):

a) Primary School - 18.700

b) High School - 2,484

PRIMARY SCHOOL : Out of 18,700 total vacant posts of Primary Schoool teachers in the State, 50% of these posts would be filled up under I phase. Draft special Recruitment Rules have already been published to this effect. The remaining 50% of the vacant posts would be filled up immediately after the process of the I phase.

SECONDARY SCHOOL : Draft notification proposing certain amendments to the C&R rules for filling up of existing vacancies of Secondary School Assistants the State has been issued. After considering the objections/ suggestions in this regard, the final notification will be issued. Thereafter, action will be taken to fill up all the existing vacancies.

ಜಗಳೂರು ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ಕುರಿತು.

414 - ಶ್ರೀ ಎಂ. ಬಸಪ್ಪ (ಜಗಳೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಜಗಳೂರು ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳ ಒಟ್ಟು ಸಂಖ್ಯೆ ಎಷ್ಟು?*

ಆ) *ಅವುಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳ ಒಟ್ಟು ಸಂಖ್ಯೆ ಎಷ್ಟು?*

ಇ) *ಸದರಿ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸಲು ಮಂಜೂರಾಗಿರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?*

ಈ) ಹಾಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು?

ಉ) ಖಾಲಿ ಇರುವ ವೈದ್ಯರುಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಳ್ಳಿಲಿರುವ ಕ್ರಮಗಳೇನು?

ಶ್ರೀ ಡಾ. ಹೆಚ್.ಸಿ ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 12 (ಹನ್ನೆರಡು) (ಒಂದು ಸಾರ್ವಜನಿಕ ಆಸ್ಪತ್ರೆ ಸೇರಿ)

ಆ) 1) ಪ್ರಾಥಮಿಕ ಆರೋಗ್ಯ ಕೇಂದ್ರಗಳು - 7

2) ಪ್ರಾಥಮಿಕ ಆರೋಗ್ಯ ಘಟಕಗಳು - 4

ಇ) 14 (ಹದಿನಾಲ್ಕು) 1 (ಒಂದು) ದಂತ ಶಸ್ತ್ರ ಚಿಕಿತ್ಸಕರು.

ಈ) 10 (ಹತ್ತು)

ಉ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಮತ್ತು ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ಆಯ್ಕೆ ಮಾಡಿ ಭರ್ತಿ ಮಾಡಲು ಕ್ರಮತೆಗೆದುಕೊಳ್ಳಲಾಗಿದೆ.

ಬೆಂಗಳೂರು ನಗರದ ಆಸ್ಪತ್ರೆಗಳಲ್ಲಿರುವ ಸೌಲಭ್ಯಗಳು

415 - ಶ್ರೀ ಜಿ. ಬಸವಣ್ಣಎಪ್ಪ(ಹೊಳೇಹೊನ್ನೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ ಆಸ್ಪತ್ರೆಗಳೆಷ್ಟು, ಮತ್ತು ಅವುಗಳಾವುವು?

ಆ) ಈ ಆಸ್ಪತ್ರೆಗಳಲ್ಲಿರುವ ಸೌಲಭ್ಯಗಳು ಯಾವುವು?

ಇ) ಈ ಆಸ್ಪತ್ರೆಗಳಲ್ಲಿ ಪ್ರತಿ ದಿವಸವು ಚಿಕಿತ್ಸೆ ಪಡೆಯುವ ರೋಗಿಗಳ ಸಂಖ್ಯೆ ಎಷ್ಟು? (ಹೊರ ಮತ್ತು ಒಳರೋಗಿಗಳ ಪ್ರತಿಯೊಂದು ಆಸ್ಪತ್ರೆಗಳ ವಿವರಗಳನ್ನೂ ಒದಗಿಸುವುದು).

ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬೆಂಗಳೂರು ನಗರದಲ್ಲಿ ಭೋದಕೇತರ ಆಸ್ಪತ್ರೆಗಳನ್ನು ಹೊರತುಪಡಿಸಿ ಏಳು (7) ಆಸ್ಪತ್ರೆಗಳು ಮತ್ತು 27 ಪ್ರಾಥಮಿಕ ಆರೋಗ್ಯ ಘಟಕಗಳಿವೆ. ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ) ವಿವರಗಳನ್ನು ಅನುಬಂಧ - 2ರಲ್ಲಿ ಕೊಡಲಾಗಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ಮಂಡಿಸಲಾಗಿದೆ.